# <u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>

ಓ.ಎಸ್. ನಂಬರ 39/2019

ಪಿಡಬ್ಲ್ಯೂ-1.

ಸಾಕ್ಷಿದಾರರಿಗೆ ಇಂದು ದಿನಾಂಕಃ 17-03-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಶ್ರೀಮತಿ ಜಿ ಡಿಕೆ ವಾದಿ ಪರ ವಕೀಲರಿಂದಃ</u>**

ನಾನು ಈ ದಾವೆಯಲ್ಲಿ ವಾದಿ ಅಂತಾ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರಪಡಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತದೆ ಮತ್ತು ಸದ್ರಿ ವಿಷಯವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪ್ರತಿಜ್ಞಾ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಸರ್ವೇ ನಂಬರ್ 78 ರ ಗಣಕೀಕೃತ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಅಂತಾ, ದಿಃ 09-09-2017 ರ ಒಂದು ಜನರಲ್ ಪವರ್ ಆಫ್ ಅಟಾರ್ನಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ2 ಅಂತಾ, ದಿಃ 11-05-2018 ರ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ3 ಅಂತಾ, ದಿಃ 22-01-2019 ರಂದು ನೀಡಿರುವ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ4 ಅಂತಾ, ದಿಃ 01-02-2019 ರಂದು ನೀಡಿರುವ ಒಂದು ಪ್ರತ್ಯುತ್ತರ ದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ5 ಅಂತಾ, ದಿಃ 28-04-2017 ರಂದು ರಾಣಿ ಹೈಪವರ್ ಬೋರ್ ವೆಲ್ ಡ್ರಿಲಿಂಗ್ ಕಾಂಟ್ರಾಕ್ಟರ್ಸ ರವರು ತಮಿಳು ಭಾಷೆಯಲ್ಲಿ ನೀಡಿರುವ ಎರಡು ರಶೀದಿಗಳನ್ನು ಹಾಜರುಪಡಿಸಿದ್ದು ನಿಪಿ6 ಮತ್ತು ನಿಪಿ7 ಅಂತಾ, ಇನ್ನೊಂದು ರಶೀದಿಯನ್ನು ಇಂಗ್ಲೀಷ ಭಾಷೆಯಲ್ಲಿ ನೀಡಿದ್ದು ಅದನ್ನು ನಿಪಿ8 ಅಂತಾ, ದಿಃ 05-03-2012 ರಂದು ನೀಡಿರುವ ಡ್ರಿಲ್ ಹೊಡೆಸಿರುವ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ9 ಅಂತಾ, ಅದೇ ರೀತಿ ದಿಃ 28-04-2016, 29-04-2016 ರಂದು ನೀಡಿರುವ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಮತ್ತು ನಿಪಿ11 ಅಂತಾ ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

ಸಿವಿಲ್ ಜಡ್ಜ, ಮುಂಡಗೋಡ.